ಕಾರಣಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಮೈಸೂರಿನ ಸಿದ್ಧಾರ್ಥ ಬಡಾವಣೆಗೆ ಸರ್ಕಾರದ ಆದೇಶ ಸಂಖ್ಯೆ ಆಕುಕ 208 ಸಿಜಿಎಂ 86, ದಿನಾಂಕ 2.8.88ರಲ್ಲಿ ಮಂಜೂರಾಗಿದ್ದು ಇದನ್ನು 10 ಹಾಸಿಗೆಗಳ ಪ್ರಸೂತಿ ಗೃಹವನ್ನಾಗಿ ಕ್ಯಾತಮಾರನಹಳ್ಳಿ, ಬಡಾವಣೆಗೆ ಸರ್ಕಾರದ ಆದೇಶ ಸಂಖ್ಯೆ ಆಕುಕ 147 ಆಯೋಸಂ 95 ದಿನಾಂಕ 5.1.96ರಲ್ಲಿ ವರ್ಗಾಯಿಸಲಾಗಿದೆ.

ಆ) ಮೈಸೂರು ನಗರ ಸಭೆಯಿಂದ ದಿ. 5.1.96ರ ಸರ್ಕಾರದ ಆದೇಶದಲ್ಲಿದ್ದ ನಿಯಮಗಳನ್ನು ಪೂರೈಸರಿರುವ ಕಾರಣ ಕಟ್ಟಡದ ಕಾಮಗಾರಿ ಕಾರ್ಯ ಕೈಗೆತ್ತಿ ಕೊಂಡಿರುವುದಿಲ್ಲ.

ವಿಷಯ:- ಪರಿಸರ ಮಾಲಿನ್ಯದ ಕಾಯ್ದೆ ಅಡಿಯಲ್ಲಿ ಹೂಡಿರುವ ಮೊಕದ್ದಮೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 459 (1104)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ, ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಸರ ಮಾಲಿನ್ಯದ ಕಾಯ್ದೆಗಳ ಉಲ್ಲಂಘನೆಗಾಗಿ ಇದುವರೆವಿಗೆ ಹೂಡಿರುವ ಮೊಕದ್ದಮೆಗಳೆಷ್ಟು?

ಆ) ಈ ಬಗ್ಗೆ ಹೊರಬಂದ ತೀರ್ಪುಗಳ ವಿವರ ನೀಡುವುದು?

ಶ್ರೀ ಬಸವರಾಜ ನೀ. ಶಿವಣ್ಣನವರ್ (ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ, ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು):-

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಮತ್ತು ವಾಯು ಮಾಲಿನ್ಯವನ್ನು ನಿಯಂತ್ರಿಸಲು ಜಲ ಮಾಲಿನ್ಯ (ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ 1974, ವಾಯು ಮಾಲಿನ್ಯ (ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ 1981ರ ಅನ್ವಯ ಕೆಲವು ನಿಯಮಗಳನ್ನು ಜಾರಿಗೊಳಿಸುತ್ತಿದೆ. ಪರಿಸರ ಮಾಲಿನ್ಯದ ಕಾಯ್ದೆಯ ಉಲ್ಲಂಘನೆ ಕಂಡು ಬಂದಾಗ, ಉಲ್ಲಂಘಿಸಿದವರ ವಿರುದ್ಧ ಕಾನೂನಿನಲ್ಲಿ ಅವಕಾಶವಿರುವಂತೆ ಮೊಕದ್ದಮೆಗಳನ್ನು ಹೂಡಲಾಗಿದೆ.

ಜಲ ಕಾಯ್ದೆಯಡಿಯಲ್ಲಿ 98 ಪ್ರಕರಣಗಳನ್ನು ಹಾಗೂ ವಾಯು ಕಾಯ್ದೆಯಡಿಯಲ್ಲಿ 41 ಪ್ರಕರಣಗಳನ್ನು ಮಾಡಲಾಗಿದೆ.

ಆ) ಜಲ ಮಾಲಿನ್ಯ (ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆಯಡಿಯಲ್ಲಿ 59

ಪ್ರಕರಣಗಳು ವಿಲೇವಾರಿ ಆಗಿರುತ್ತವೆ ಹಾಗೂ ಹಾಯು ಮಾಲಿನ್ಯ (ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆಯಡಿಯಲ್ಲಿ 18 ಪ್ರಕರಣಗಳು ವಿಲೇವಾರಿಯಾಗಿರುತ್ತವೆ.

ವಿಷಯ:- ಪರಿಸರ ಮಾಲಿನ್ಯ ಕ್ರಮ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 460 (1103)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ, ತಂತ್ರಜ್ಞಾನ ಮತ್ತು ಅಸಂಪ್ರದಾಯಿಕ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪರಿಸರ ಮಾಲಿನ್ಯಕ್ಕೆ ಪ್ರಮುಖ ಕಾರಣಗಳಾವುವು?

2. ಇದರ ತಡೆಗೆ ಸರ್ಕಾರದವರು ಕೈಗೊಳ್ಳುತ್ತಿರುವ ಕ್ರಮಗಳೇನು?

ಶ್ರೀ ಬಸವರಾಜ ನೀ. ಶಿವಣ್ಣನವರ್ (ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ, ತಂತ್ರಜ್ಞಾನ ಮತ್ತು ಅಸಂಪ್ರದಾಯಿಕ ಇಂಧನ ರಾಜ್ಯ ಸಚಿವರು):-

1. ಪರಿಸರ ಮಾಲಿನ್ಯಕ್ಕೆ ಪ್ರಮುಖ ಕಾರಣಗಳೇನೆಂದರೆ

1. ಕಾರ್ಖಾನೆಗಳು ಹಾಗೂ ಸ್ಥಳೀಯ ಸಂಸ್ಥೆಗಳಿಂದ ಹೊರ ಬಿಡಲಾಗುತ್ತಿರುವ ಕಲುಷಿತ ನೀರು.

2. ಕಾರ್ಖಾನೆಗಳು ಹಾಗೂ ವಾಹನಗಳಿಂದ ಉಂಟಾಗುತ್ತಿರುವ ವಾಯು ಮತ್ತು ಶಬ್ದ ಮಾಲಿನ್ಯ.

3. ಕಾರ್ಖಾನೆಗಳು ಹಾಗೂ ಸ್ಥಳೀಯ ಸಂಸ್ಥೆಗಳಿಂದ ಉತ್ಪತ್ತಿಯಾಗುತ್ತಿರುವ ಘನ ತ್ಯಾಜ್ಯ ವಸ್ತುಗಳು, ಅಪಾಯಕಾರಿ ತ್ಯಾಜ್ಯ ವಸ್ತುಗಳು ಮತ್ತು ಆಸ್ಪತ್ರೆಗಳಿಂದ ಉಂಟಾಗುತ್ತಿರುವ ತ್ಯಾಜ್ಯ ವಸ್ತುಗಳು (ಬಯೋ ಮೆಡಿಕಲ್ ವೇಸ್ಟ್.)

2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಾರ್ಖಾನೆಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಮಾಲಿನ್ಯಕಾರಣಗಳ (ಗಾಳಿ, ನೀರು ಮತ್ತು ಘನ ತ್ಯಾಜ್ಯಗಳು) ನಿಯಂತ್ರಣ, ಮಲೀನ ನೀರಿನ ಶುದ್ಧೀಕರಣ ಘಟಕಗಳ ಸ್ಥಾಪನೆ, ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳು, ಘನ ತ್ಯಾಜ್ಯಗಳು ಹಾಗೂ ಅಪಾಯಕಾರಿ ಘನ ತ್ಯಾಜ್ಯಗಳ ವಿಲೇವಾರಿಗೆ ಸೂಕ್ತ ಸೌಲಭ್ಯಗಳ ಬಳಕೆ, ಇತ್ಯಾದಿಗಳಿಗೆ ಮಾರ್ಗದರ್ಶನ ನೀಡುವುದರ ಮೂಲಕ ಮಾಲಿನ್ಯಕಾರಕಗಳ (ಗಾಳಿ, ನೀರು ಮತ್ತು ಘನ ತ್ಯಾಜ್ಯಗಳು) ನಿಯಂತ್ರಣ ಮಾಡುತ್ತಿದೆ.

ಕಾರ್ಖಾನೆಗಳ ಕಲುಷಿತ ನೀರು ಮತ್ತು ವಾಯು ಇವುಗಳ ಉತ್ಪತ್ತಿಯ ಮೂಲಗಳ ತನಿಖೆ ಮಾಡಿ ನಿರ್ದಿಷ್ಟ ಅವಧಿಯ ಸಮ್ಮತಿ ಪತ್ರಗಳನ್ನು ಜಲ ಮತ್ತು ವಾಯು ಕಾಯ್ದೆಗಳ ಅಡಿಯಲ್ಲಿ ನೀಡಲಾಗುತ್ತಿದೆ. ಎಲ್ಲಿ ಕಾಯ್ದೆಗಳ ಉಲ್ಲಂಘನೆ ಕಂಡು